ಇಂತಹ ಲೋಪ ಮಾಡಿದವರಿಗೆ ಶಿಕ್ಷೆ ಕೊಡಬೇಕಾಗುತ್ತದೆ. ಕಾರ್ಯದರ್ಶಿಗಳಿಗೆ ಹೇಳಿದರೆ ಏನು ಅರ್ಥ, ಕಾರ್ಯದರ್ಶಿಗಳು ಇದಕ್ಕೆ ಜವಾಬ್ದಾರರಾ? ಮಂತ್ರಿಗಳು ಇದಕ್ಕೆ ಜವಾಬ್ದಾರಿ.

ಅಧ್ಯಕ್ಷರು : ಮಂತ್ರಿಗಳಿಗೆ ಬರೆದು ಸೆಕ್ರೆಟರಿಗಳಿಗೆ ಒಂದು ಕಾಪಿ ಕಳುಹಿಸಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ರಾಜ್ಯದಲ್ಲಿ ಬರ ಬಂದಿದೆ. ಇವರು ಉತ್ತರ ಕೊಡುವುದಕ್ಕೂ ಬರ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹಿರಿಯ ಸದಸ್ಯರು ಕ್ಲಾರಿಫಿಕೇಷನ್ ಕೇಳುತ್ತಿದ್ದಾರೆ. ಆದ್ದರಿಂದ ನಾನು ಈಲ್ಡ್ ಆದೆ. ತಾವೂ ಕೂಡ ಉತ್ತರ ಕೊಡುತ್ತಿದ್ದಿರಿ.

ರಾಜ್ಯದಲ್ಲಿನ ತೆಂಗಿನ ಮರಗಳು ಒಣಗುತ್ತಿರುವುದನ್ನು ಕುರಿತು

338(3042) : ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ತಲೆದೋರಿರುವ ಬರಗಾಲದಿಂದ ತೋಟಗಾರಿಕೆ ಬೆಳೆಗಳಿಗೆ ತೊಂದರೆಯಾಗಿದೆಯೇ;

ಆ) ವಿಶೇಷವಾಗಿ ಅಸಂಖ್ಯಾತ ಸಂಖ್ಯೆಯಲ್ಲಿ ತೆಂಗಿನ ಮರಗಳು ಒಣಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಜಿಲ್ಲಾವಾರು ವಿವರಗಳನ್ನು ನೀಡುವುದು;

ಇ) ತೆಂಗಿನ ಮರಗಳನ್ನು ಕಳೆದುಕೊಂಡಿರುವ ರೈತರಿಗೆ ಸರ್ಕಾರದಿಂದ ಪರಿಹಾರ ನೀಡುವ ಯೋಜನೆಗಳೇನಾದರೂ ಇವೆಯೇ;

ಈ) ಹಾಗಿದ್ದರೆ, ಯೋಜನೆಯ ವಿವರಗಳನ್ನು ನೀಡುವುದು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಹೌದು

ಆ) ಹೌದು, ಕೆಲವು ಜಿಲ್ಲೆಗಳಲ್ಲಿ ತೆಂಗಿನ ಮರಗಳು ಒಣಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಪರಿಹಾರ ನೀಡುವ ಯಾವುದೇ ಯೋಜನೆಯು ತೋಟಗಾರಿಕೆ ಇಲಾಖೆಯಲ್ಲಿರುವುದಿಲ್ಲ. ಆದರೆ ತೆಂಗುಬೆಳೆ ಅಭಿವೃದ್ಧಿ ಹಿತದೃಷ್ಟಿಯಿಂದ ಹಮ್ಮಿಕೊಳ್ಳಲಾದ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ.

1. ಪ್ರದೇಶಗಳ ವಿಸ್ತರಣೆಗಾಗಿ ಉತ್ತಮ ಗುಣಮಟ್ಟದ ಗಿಡಗಳ ಖರೀದಿ ಮತ್ತು ಗೊಬ್ಬರಗಳ ಬಳಕೆಗಾಗಿ ಆರ್ಥಿಕ ನೆರವು ಒದಗಿಸಲಾಗುತ್ತಿದೆ.
2. ತೆಂಗಿನ ತೋಟಗಳ ಸ್ಥಾಪನೆ ಮತ್ತು ಅಭಿವೃದ್ಧಿಪಡಿಸಲು ರೈತರು ಸಾಲ ಸೌಲಭ್ಯ ಪಡೆಯಲು ನೆರವು ನೀಡಲಾಗುತ್ತಿದೆ.
3. ಸಾವಯವ ಗೊಬ್ಬರ ಉತ್ಪಾದಿಸಿ ತಮ್ಮ ತೋಟಗಳಲ್ಲಿ ಬಳಸಲು ಆರ್ಥಿಕ ನೆರವು ಒದಗಿಲಾಗುತ್ತಿದೆ.
4. ಪರ್ಯಾಯ ಬೆಳೆ/ಅಂತರ ಬೆಳೆ ಬೆಳೆಸಲು ನೆರವು ಒದಗಿಸಲಾಗುವುದು.

5. ಉತ್ತಮ ಗುಣಮಟ್ಟದ ತೆಂಗಿನ ಗಿಡಗಳನ್ನು ಯೋಗ್ಯ ಬೆಲೆಗೆ ಒದಗಿಸಲಾಗುವುದು.
6. ತೋಟಗಳ ಸ್ಥಾಪನೆ ಹಾಗೂ ನಿರ್ವಹಣೆಗೆ ಅಗತ್ಯವಿರುವ ತಾಂತ್ರಿಕ ಮಾಹಿತಿ ನೀಡಲಾಗುವುದು.
7. ತೆಂಗು ಅಭಿವೃದ್ಧಿ ಮಂಡಳಿಯಿಂದ ಅನುತ್ಪಾದಕ ಮರಗಳ ಬದಲಾವಣೆಗೆ ಆರ್ಥಿಕ ನೆರವು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಮೇಲಿನಂತೆ

ಅನುಬಂಧ

ತೆಂಗಿನ ಮರಗಳು ಒಣಗಿರುವ ಬಗ್ಗೆ ಜಿಲ್ಲಾವಾರು ಅಂದಾಜು ವಿವರಗಳು

ಕ್ರ. ಸಂ.	ಜಿಲ್ಲೆಯ ಹೆಸರು	ಒಣಗಿರುವ ತೆಂಗಿನ ಮರಗಳ ಸಂಖ್ಯೆ
1.	ಬೆಂಗಳೂರು(ನಗರ)	–
2.	ಬೆಂಗಳೂರು (ಗ್ರಾ)	–
3.	ಶಿವಮೊಗ್ಗ	–
4.	ಕೋಲಾರ	–
5.	ದಾವಣಗೆರೆ	–
6.	ತುಮಕೂರು	3,52,500
7.	ಚಿತ್ರದುರ್ಗ	4,000
8.	ಮೈಸೂರು	200
9.	ಮಂಡ್ಯ	–
10.	ಹಾಸನ	–
11.	ಚಾಮರಾಜನಗರ	–
12.	ಮಡಿಕೇರಿ	–
13.	ಉಡುಪಿ	–
14.	ಚಿಕ್ಕಮಗಳೂರು	3,250
15.	ದಕ್ಷಿಣ ಕನ್ನಡ	–
16.	ಬೆಳಗಾವಿ	–
17.	ವಿಜಾಪುರ	2,400
18.	ಬಾಗಲಕೋಟೆ	2,500
19.	ಧಾರವಾಡ	–
20.	ಗದಗ	5,300
21.	ಶಿರಸಿ	–
22.	ಹಾವೇರಿ	76,400

1	2	3
23.	ಗುಲ್ಬರ್ಗಾ	1,400
24.	ರಾಯಚೂರು	4,350
25.	ಕೊಪ್ಪಳ	10,000
26.	ಬೀದರ್	–
27.	ಬಳ್ಳಾರಿ	–
	ಒಟ್ಟು	**4,62,300**

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಕೊಟ್ಟಿರತಕ್ಕಂತಹ ಉತ್ತರ ಸತ್ಯಕ್ಕೆ ಸಾವಿರ ಮೈಲಿ ದೂರದಲ್ಲಿರತಕ್ಕಂತಹ ಉತ್ತರ. ಕರ್ನಾಟಕ ರಾಜ್ಯದಲ್ಲಿ ಏಳು ಕೋಟಿ ತೆಂಗಿನ ಮರಗಳು ಇವೆ. ಈ ಬರಗಾಲದಿಂದ ಕೇವಲ ನಾಲ್ಕು ಲಕ್ಷ 62,000 ಮರಗಳು ಒಣಗಿವೆ ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಈ ಸದನದಲ್ಲಿದ್ದಾರೆ. ಅವರು ಒಂದು ವಾರದ ಕಾಲ ನಮ್ಮ ಜಿಲ್ಲೆಯ ತಾತ್ಕಾಲಿಕ ಉಸ್ತುವಾರಿ ಮಂತ್ರಿಗಳಾಗಿ ಬರಗಾಲದ ಪರಿಸ್ಥಿತಿಯನ್ನು ನೋಡುವುದಕ್ಕೆ ಅವರು ಬಂದಿದ್ದರು. ನಾನು ಕೆಲವು ಚಿತ್ರಗಳನ್ನು ಅವರ ಗಮನಕ್ಕೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು ನಾಲ್ಕು ಲಕ್ಷ ತೆಂಗಿನ ಮರಗಳು, ಒಣಗತಕ್ಕಂತಹ ಪರಿಸ್ಥಿತಿಗೆ ತಲುಪಿವೆ. ಆದರೆ ಈಗಾಗಲೇ 50,000 ತೆಂಗಿನ ಮರಗಳು ಒಣಗಿ ಹೋಗಿವೆ. ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕೆನ್ನುವ ಉದ್ದೇಶದಿಂದ ನಾನು ಈ ಫೋಟೋಗಳನ್ನು ತರಿಸಿದ್ದೇನೆ. ಇದನ್ನು ನಾನು ಮಾನ್ಯ ತೋಟಗಾರಿಕಾ ಸಚಿವರಿಗೆ ಹಾಗೂ ಮಾನ್ಯ ಸಭಾ ನಾಯಕರ ಗಮನಕ್ಕೋಸ್ಕರ ಕಳುಹಿಸಿಕೊಡುತ್ತೇನೆ. ಯಾವ ರೀತಿ ತೆಂಗಿನ ಮರಗಳು ಒಣಗಿ ಹೋಗುತ್ತಿವೆ ಎಂಬುದು ಗೊತ್ತಾಗುತ್ತದೆ. ಅವರು ಉತ್ತರದಲ್ಲಿ ಬೆಂಗಳೂರು ನಗರದಲ್ಲಿ ಒಂದು ತೆಂಗಿನ ಮರವೂ ಒಣಗಿಲ್ಲ, ಗ್ರಾಮಾಂತರ ಜಿಲ್ಲೆಯಲ್ಲಿ ಒಂದೂ ಸಹಿತ ಒಣಗಿಲ್ಲ, ಶಿವಮೊಗ್ಗ, ಕೋಲಾರ, ದಾವಣಗೆರೆ ಜಿಲ್ಲೆಗಳಲ್ಲಿ ತೆಂಗಿನ ಮರಗಳು ಒಣಗಿಲ್ಲ, ಕೇವಲ ತುಮಕೂರು ಜಿಲ್ಲೆಯಲ್ಲಿ ಮಾತ್ರ 3.52 ಲಕ್ಷ, ಕೊಪ್ಪಳದಲ್ಲಿ 10,000 ಮರಗಳು ಒಣಗಿವೆ ಎಂದು ಹೇಳಿದ್ದಾರೆ, ಸತ್ಯಕ್ಕೆ ದೂರವಾದ ಸುಳ್ಳು ಅಂಕಿ ಅಂಶಗಳನ್ನು ಈ ಇಲಾಖೆಯವರು ಸದನಕ್ಕೆ ಒದಗಿಸಿದ್ದಾರೆ. ಈ ಫೋಟೋಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ದಯವಿಟ್ಟು ಈ ವಿಚಾರವನ್ನು ಮರುಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ರಾಜ್ಯದಲ್ಲಿ ಇರತಕ್ಕಂತಹ ಬರಗಾಲದ ಪರಿಸ್ಥಿತಿಯನ್ನು ಅಧ್ಯಯನ ಮಾಡಲಿಕ್ಕೆ ನಾನೂ ಸಹಿತ ಕಾರಿನಲ್ಲಿ 10 ರಿಂದ 12 ಜಿಲ್ಲೆಗಳಿಗೆ ಪ್ರವಾಸ ಮಾಡಿದ್ದೆ, ಸುಮಾರು 50 ರಿಂದ 75 ಲಕ್ಷ ತೆಂಗಿನ ಮರಗಳು ಒಣಗಿವೆ ಎಂಬುದು ನನ್ನ ಅಂದಾಜು. ನಾನು ಸರ್ಕಾರವನ್ನು ಒತ್ತಾಯ ಮಾಡುವುದು, ಈ ಅಂಕಿ ಅಂಶಗಳು ಏನಿವೆ, ಇದನ್ನು ಕೇವಲ ತೆಂಗಿನ ಮರಗಳು ಅಲ್ಲ, ಶಿವಮೊಗ್ಗದಿಂದ ಹಿಡಿದು ತರೀಕೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆ ಮತ್ತು ತುಮಕೂರು ಜಿಲ್ಲೆಗಳಲ್ಲಿ ತೆಂಗಿನ ಮರಗಳು, ಅಡಿಕೆ ಮರಗಳು ಸಪೋಟ ಮರಗಳು ಮತ್ತು ತೋಟಗಾರಿಕೆ ಮರಗಳಿಗೆ ಹಾನಿಯಾಗಿದೆ. ನಾಳೆ ಕೇಂದ್ರ ಸರ್ಕಾರದಿಂದ ಏನಾದರೂ ಪರಿಹಾರ ಕೊಡಬೇಕಾದರೆ ಕೊನೆ ಪಕ್ಷ ಅಂಕಿ ಅಂಶಗಳಾದರೂ ಕರೆಕ್ಟ್ ಆಗಿ ಇರಬೇಕಾಗುತ್ತದೆ. ಪ್ಲ್ಯಾನಿಂಗ್ ಕಮಿಷನ್ ಮುಂದೆ ಹೋಗಬೇಕಾದರೆ ಅಂಕಿ ಅಂಶಗಳು

ಕರೆಕ್ಟಾಗಿ ಇರಬೇಕಾಗುತ್ತದೆ. ನಾಳೆ ಬರಗಾಲದ ವಿಚಾರದಲ್ಲಿ ಕೇಂದ್ರ ಸರ್ಕಾರವನ್ನು ಕೇಳಬೇಕೆಂದು ಹೇಳಿದರೆ, ಅವರು ಈ ಉತ್ತರವನ್ನು ಮಾನ್ಯ ಅದ್ವಾನಿಯವರು ನಿಮಗೆ ತೋರಿಸುತ್ತಾರೆ. ನೀವು ಸದನದಲ್ಲಿ ಈ ರೀತಿ ಹೇಳಿದ್ದೀರಿ, ಎಲ್ಲಿ ತೆಂಗಿನ ಮರಗಳು ಒಣಗಿವೆ, ಎಲ್ಲಿ ತೋಟಗಾರಿಕೆ ಮರಗಳು ಒಣಗಿವೆ ಎಂದು ಕೇಳುತ್ತಾರೆ. ಅದಕ್ಕೋಸ್ಕರ ನಾನು ಮೊದಲನೇ ಪ್ರಶ್ನೆ ಕೇಳಿದ್ದು, ಅಂಕಿ ಅಂಶಗಳು ಸರಿಯಾದ ಅಂಕಿ ಅಂಶಗಳು ಅಲ್ಲ. ನಿಮ್ಮ ಇಲಾಖೆ ನಿರ್ಜೀವವಾಗಿದೆ. ಅಂಕಿ ಅಂಶಗಳನ್ನು ಮರುಪರಿಶೀಲನೆ ಮಾಡತಕ್ಕಂತಹ ಭರವಸೆಯನ್ನು ಹಾಗೂ ಅಂಕಿ ಅಂಶಗಳನ್ನು ಸರಿಯಾಗಿ ಸಂಗ್ರಹ ಮಾಡುವುದಕ್ಕೆ ತಾವು ಒಪ್ಪಿಗೆ ನೀಡಬೇಕೆಂದು ಮೊದಲನೇ ಉಪ ಪ್ರಶ್ನೆ ಕೇಳುತ್ತಿದ್ದೇನೆ. ಎರಡನೇ ಪ್ರಶ್ನೆ, ಪ್ರತಿ ತೆಂಗಿನ ಮರಕ್ಕೆ ಸಹಿತ ಕೊನೆ ಪಕ್ಷ ಎರಡರಿಂದ ಮೂರು ಸಾವಿರ ರೂ. ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಿಮಗೆ ಗೊತ್ತಿದೆ. ಒಂದು ತೆಂಗಿನ ಮರ ಬೆಳೆದು ಫಸಲು ಕೊಡಬೇಕಾದರೆ ಏಳು ವರ್ಷ ಬೇಕಾಗುತ್ತದೆ. 20–25 ವರ್ಷಗಳಿಂದ ಬೆಳೆದಿರತಕ್ಕಂತಹ ತೆಂಗಿನ ಮರಗಳು ಸುಳಿಸಮೇತ ಒಣಗಿ ಹೋಗಿವೆ. ಇಂತಹ ಪರಿಸ್ಥಿತಿ ನಾವು ನೋಡಿಯೇ ಇರಲಿಲ್ಲ. ಅವರು 20 ವರ್ಷ ಕಾಯುವುದಕ್ಕಾಗುತ್ತಾ? ಒಂದು ತೆಂಗಿನ ಮರಕ್ಕೆ ಕನಿಷ್ಟ ಎರಡರಿಂದ ಮೂರು ಸಾವಿರ ರೂ. ಪರಿಹಾರವನ್ನು ಕೊಡುವುದಕ್ಕೆ ನಿಮಗೆ ತೊಂದರೆ ಏನು ಎನ್ನುವುದು ಎರಡನೆಯದು. ಮೂರನೆಯದು ತೆಂಗಿನ ಮರಗಳನ್ನು ಮತ್ತೆ ಬೆಳಸಲಿಕ್ಕೆ, ಅಡಿಕೆ ಮರಗಳನ್ನು ಬೆಳಸಲಿಕ್ಕೆ ಬಡ್ಡಿ ಇಲ್ಲದೆ ಸಾಲವನ್ನು ಒದಗಿಸಲಿಕ್ಕೆ ನೀವು ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ತಪ್ಪು ಮಾಹಿತಿ ಸದನಕ್ಕೆ ಕೊಡಬೇಡಿ. ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತೀರಿ. ನಾವೆಲ್ಲರೂ ಬಂದು ಕೇಂದ್ರ ಸರ್ಕಾರದ ಬಳಿ 1500 ಕೋಟಿ ರೂಪಾಯಿ ಪರಿಹಾರ ಕೇಳಿದ್ದೇವೆ. ನಾಳೆ ಆ ಪರಿಹಾರ ಈ ವರ್ಷ ಮಳೆ ಬಾರದೇ ಇದ್ದರೆ ನಾಲ್ಕು ಸಾವಿರ ಕೋಟಿ ರೂ. ಕೇಳಬೇಕಾಗುತ್ತದೆ. ಸದನದಲ್ಲಿ ಯಾರೋ ಕೆಳ ಮಟ್ಟದ ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ಉತ್ತರ ಬರೆದುಕೊಟ್ಟರೆ ಅದನ್ನೇ ಓದಿದರೆ ಹೇಗಾಗುತ್ತದೆ? ಆದ್ದರಿಂದ ದಯವಿಟ್ಟು ಇದನ್ನು ಮರುಪರಿಶೀಲನೆ ಮಾಡಿ ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಪಿ.ಜಿ.ಆರ್. ಸಿಂಧ್ಯರವರು ಹೇಳುವ ದೃಷ್ಟಿಯಲ್ಲಿ ತೆಂಗಿನ ಮರಗಳು ಏಕೆ ಇಷ್ಟು ಒಣಗಿ ಹೋಗಿವೆ ಎಂದರೆ ಕಳೆದ ಎರಡು–ಮೂರು ವರ್ಷಗಳಿಂದ ಕೂಡ ಯಾವ ಯಾವ ಜಿಲ್ಲೆಯಲ್ಲಿ ನಾವು ತೆಂಗಿನ ಮರಗಳನ್ನು ಹೇಗೆ ಬೆಳೆದಿದ್ದೇವೆ, ಆ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಅತ್ಯಂತ ಕಡಿಮೆ ಆಗಿರುವುದು ಮತ್ತು ಅಂತರ್ಜಲ ಮಟ್ಟ ತುಂಬ ಕುಸಿದಿರುವುದರಿಂದ ತೋಟಗಾಗಿಕೆ ಬೆಳೆಗಳು ಒಣಗಿ ಹೋಗುವ ಪರಿಸ್ಥಿತಿಯನ್ನು ನಾವು ಕಣುತ್ತಿದ್ದೇವೆ. ಕೆಲವು ಅಂಕಿ ಅಂಶಗಳು ಸರಿಯಾಗಿಲ್ಲ, ವ್ಯತ್ಯಾಸ ಇವೆ, ಪುನರ್ ಪರಿಶೀಲನೆ ಸಲಹೆ ಕೊಟ್ಟಿದ್ದಾರೆ. ನಮ್ಮ ಇಲಾಖೆಯ ವತಿಯಿಂದ ಪುನರ್ ಪರಿಶೀಲನೆ ಮಾಡುತ್ತೇವೆ. ನಮ್ಮ ಇಲಾಖೆಯಲ್ಲಿರುವ ಅಂಕಿ ಅಂಶಗಳ ಆಧಾರದ ಮೇಲೆ ನಾವು ಮಾಹಿತಿ ಕೊಟ್ಟಿದ್ದೇವೆ. ಇನ್ನು ಹೆಚ್ಚಿಗೆ ಒಣಗಿವೆ ಎಂದು ತಮ್ಮ ಅಭಿಪ್ರಾಯ ಇದ್ದರೆ, ಪುನರ್ ಪರಿಶೀಲನೆ ಮಾಡಿ ಎಷ್ಟು ಒಣಗಿವೆ ಎಂಬ ಮಾಹಿತಿ ಒದಗಿಸಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಅದರ ಜೊತೆಗೆ ಪರಿಹಾರವನ್ನು ಒದಗಿಸಿಕೊಡಬೇಕೆಂದು ಏನು ಕೇಳುತ್ತಿದ್ದಾರೆ, ನಾನೇ ಸ್ವತ ಅನೇಕ ತೋಟಗಳಿಗೆ ಭೇಟಿ ಕೊಟ್ಟು ನೋಡಿದ್ದೇನೆ, ಅವರು ಕೇವಲ ತೆಂಗಿನ ತೋಟ ಮಾತ್ರ ಅಲ್ಲ, ದ್ರಾಕ್ಷಿ, ದಾಳಿಂಬೆ

ಮತ್ತು ನಿಂಬೆ ತೋಟಗಳಿಗೆ ಭೇಟಿ ಕೊಟ್ಟಿದ್ದೇನೆ. ಇತ್ತೀಚೆಗೆ ನಾವು ಇನ್ನೂ ಹೆಚ್ಚಿಗೆ ಆದ್ಯತೆ ಕೊಟ್ಟಿದ್ದೇವೆ. ಬಿಜಾಪುರ, ಗುಲ್ಬರ್ಗ ಮತ್ತು ಬೆಳಗಾಂ ಜಿಲ್ಲೆಗಳಿಗೆ ಕೂಡ ಭೇಟಿ ಕೊಟ್ಟು ಅವೆಲ್ಲವೂ ಅಧ್ಯಯನ ಮಾಡಿ ಬಂದಿದ್ದೇನೆ. ರೈತರ ಪರಿಸ್ಥಿತಿ ನಾನು ಮನಗಂಡಿದ್ದೇನೆ. ಬೆಳೆಗಳು ಒಣಗಿವೆ. ಸುಮಾರು ಹತ್ತಾರು ವರ್ಷಗಳಿಂದ ಬೆಳೆದ ತೋಟಗಳು ಮಳೆಯ ನೀರಿನ ಅಭಾವದಿಂದ ಒಣಗಿರುವುದನ್ನು ನಾವು ಕಾಣುತ್ತಿದ್ದೇವೆ. ಅಂಕಿ ಅಂಶಗಳ ವ್ಯತ್ಯಾಸ ಇದ್ದರೆ ಜಿಲ್ಲಾಧಿಕಾರಿಗಳ ಮೂಲಕ ವರದಿ ತರಿಸಿಕೊಂಡು ಯೋಚನೆ ಮಾಡುತ್ತೇವೆ. ಜೊತೆಗೆ ನಾನೂ ಕೂಡ ಒಂದು ಉದ್ದೇಶ ಇಟ್ಟುಕೊಂಡಿದ್ದೇನೆ. ತೋಟಗಾರಿಕೆ ಬೆಳೆಗಳು ಇಷ್ಟು ನಷ್ಟವಾಗಿರುವಾಗ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ತೋಟಗಾರಿಕೆ ಅಧಿಕಾರಿಗಳ ಜೊತೆ ಸೇರಿ ಎಷ್ಟು ನಷ್ಟ ಆಗಿದೆ ಎಂದು ಅಂದಾಜು ಮಾಡುವುದು ಮಾಡಿದ್ದೇನೆ. ಆದರೂ ಕೂಡ ಏನಾದರೂ ಪರಿಹಾರ ಕೊಡಬೇಕೆಂದು ಸಲಹೆ ಕೊಟ್ಟಿದ್ದೀರಿ, ಇವತ್ತು ತೋಟಗಾರಿಕೆ ಬೆಳೆ ಒಂದಕ್ಕೆ ಮಾತ್ರ ಅಲ್ಲ, ಎಲ್ಲಾ ಬೆಳೆಗಳೂ ಕೂಡ ನಷ್ಟ ಪರಿಸ್ಥಿತಿಯಲ್ಲಿ ಇವೆ. ನಾವು ಇವತ್ತು ತೋಟಗಾರಿಕೆ ಇಲಾಖೆಯಲ್ಲಿ ಆಲೂಗಡ್ಡೆಗೆ ವಿಮೆ ಮಾಡಿದ್ದೇವೆ. ಇದಕ್ಕೆ ವಿಮೆಗೆ ಒಳಪಡಿಸುವುದಕ್ಕೆ ನೀವು ಸಲಹೆ ಮಾಡುತ್ತಿದ್ದೀರಿ, ಇತರ ಬೆಳೆಗಳಿಗೆ ಆ ತರಹ ಅವಕಾಶ ಇಲ್ಲ. ಪರಿಹಾರ ಕೊಡಬೇಕೆಂದು ತಮ್ಮ ಸಲಹೆ ಏನಿದೆ, ಅದು ತಮಗೆ ಗೊತ್ತಿದೆ. ರಾಜ್ಯದಲ್ಲಿ ರಾಜ್ಯ ಸರ್ಕಾರ ಎಷ್ಟು ತೀವ್ರತರವಾದ ಗಮನವನ್ನು ಬರಪರಿಹಾರಕ್ಕೆ ಕೊಡುತ್ತಿದೆ ಎಂದು ಹೇಳುವಾಗ ಇದಕ್ಕೆ ಪರಿಹಾರ ಕೊಡಬೇಕೆಂದು ಚಿಂತನೆ ಏನಿದೆ, ನಾವು ಅಂದಾಜು ಮಾಡಿ ಕೇಂಬ್ರಕ್ಕೆ ವರದಿ ಕೊಡಬೇಕಾಗಿದೆ, ಎಷ್ಟು ನಷ್ಟವಾಗಿದೆ ಎಂಬ ವರದಿ ತರಿಸಿಕೊಂಡ ಮೇಲೆ ಈ ವಿಷಯ ಯೋಚನೆ ಮಾಡುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಸಿಂಧ್ಯರವರು ಇದು ಏನು ಕೇಳಿದ್ದಾರೆ, ಅದು ನನ್ನ ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ಐದರಿಂದ ಆರು ಲಕ್ಷ ಮರಗಳು ಒಣಗಿ ಹೋಗಿವೆ. ನಮ್ಮ ಕಡೆ ಎರಡು ಕಾಯಿಲೆ ಬಂದಿವೆ. ಒಂದು ಕೀಟದಿಂದ ಆಗಿರುವುದು ಇನ್ನೊಂದು ನುಸಿ ರೋಗ. ಉದಾಹರಣೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಡೂರಿನಿಂದ ಶಿವಮೊಗ್ಗಕ್ಕೆ ಹೋಗುವ ರಸ್ತೆಯಲ್ಲಿ ಹೆಚ್ಚು ಕಡಿಮೆ ಕಣ್ಣಿಗೆ ಕಾಣುತ್ತದೆ. ಕ್ಯಾಟರ್‌ಪಿಲ್ಲರ್ ಎಂದು ಒಂದು ಹುಳು ಆ ಹುಳು ಮರದಲ್ಲಿ ಸೇರಿಕೊಂಡ ಮೇಲೆ ಮರದಲ್ಲಿ ಮೊಟ್ಟೆ ಹಾಕಿ ಮರಿ ಮಾಡಿ ಆ ಮರದಲ್ಲಿ ಇರುವ ಗ್ರೀನಿಷ್ ಪೂರ್ತಿ ಮಾಡಿದ ಮೇಲೆ, ಜೊಲ್ಲು ರಸವನ್ನು ಸುರಿಸುವ ಮುಖಾಂತರ ಕೆಳಗೆ ಬಿದ್ದು ಇನ್ನೊಂದು ಮರಕ್ಕೆ ಗಾಳಿ ಮುಖಾಂತರ ಹೋಗುತ್ತದೆ. ಮಾನ್ಯ ತೋಟಗಾರಿಕಾ ಸಚಿವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಏನೂ ಆಗಿಲ್ಲವೆಂದು ಹೇಳಿದ್ದಾರೆ. ಯಾವ ಕಡೆಗಳಲ್ಲಿ ತೆಂಗಿನ ಮರಕ್ಕೆ ಈ ಕಮ್ಮತಲಿಹುಳು ಬಂದಿದೆ ಅದನ್ನು ಎಂಡೋಮಿಕ್ ಏರಿಯಾ ಎಂದು ಹೇಳಿ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿದರೆ ಮಾತ್ರ ಕೇಂದ್ರ ಸರ್ಕಾರದ ಯೋಜನೆ ಏನಿದೆ ಅದರ ಅಡಿಯಲ್ಲಿ ನಮಗೆ ಏನಾದರು ಅನುದಾನ ಬಂದು ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಇನ್ನೊಂದು ವಿಚಾರವೆಂದರೆ ಸುಮಾರು 5 ರಿಂದ ಆರು ಲಕ್ಷ ಮರಗಳು ಹೋಗಿವೆ. ಹಿಂದಿನ ಸರ್ಕಾರದಲ್ಲಿ ಈ ರೀತಿ ಹೋದಂಥ ಮರಕ್ಕೆ ಒಂದು ಮರಕ್ಕೆ 200 ರೂಪಾಯಿಗಳನ್ನು ಹಾಗೂ ತೋಟಗಾರಿಕಾ ಇಲಾಖೆಯಿಂದ ಒಂದು ತೆಂಗಿನ ಸಸಿಯನ್ನು ಕೊಡುತ್ತಿದ್ದರು. ಆದರೆ ಈ ಸರ್ಕಾರದಲ್ಲಿ ಆ ರೀತಿ ಕೊಡುವಂಥ ಪ್ರಯತ್ನ ಮಾಡಲಿಲ್ಲ.

ಅಧ್ಯಕ್ಷರು : ಕೃಷ್ಣಮೂರ್ತಿಯವರೇ ಒಂದ್ನಿಮಿಷ. ಇಲ್ಲಿ ಏಳು ಸದಸ್ಯರುಗಳು ಸೆಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳುವವರಿದ್ದಾರೆ. ಆದ್ದರಿಂದ ಕೃಷಿ ಇಲಾಖಾ ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಈ ವಿಷಯಗಳನ್ನೆಲ್ಲಾ ಹೇಳಬಹುದಲ್ಲಾ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ನಾನೇನೂ ಜಾಸ್ತಿ ಮಾತನಾಡುವುದಿಲ್ಲ. ಒಂದ್ನಿಮಿಷ ಅಷ್ಟೆ. ಹೇಗಿದ್ದರು ನನಗೆ ಮಾತನಾಡುವುದಕ್ಕೆ ಈಗ ಅವಕಾಶ ಕೊಟ್ಟಿದ್ದೀರಿ. ಇನ್ನು ಒಂದೇ ನಿಮಿಷ ಅಷ್ಟೆ.

ಅಧ್ಯಕ್ಷರು : ಒಂದ್ನಿಮಿಷ ಆಗುವುದಿಲ್ಲ. ಏಕೆಂದರೆ ಈಗ 9 ಜನ ಇದ್ದಾರೆ ಒಬ್ಬೊಬ್ಬರಿಗೆ ಎರಡು ನಿಮಿಷ ಎಂದರೂ 18 ನಿಮಿಷಗಳಾಗುತ್ತವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ತೋಟಗಾರಿಕಾ ಸಚಿವರಲ್ಲಿ ಒತ್ತಾಯ ಮಾಡುವುದೇನೆಂದರೆ ರೈತರಿಗೆ ಪರಿಹಾರವನ್ನು ಕೊಡಬೇಕು.

ಅಧ್ಯಕ್ಷರು : ಕೃಷ್ಣಮೂರ್ತಿಯವರೇ, ಇಲ್ಲಿ ದಯವಿಟ್ಟು ಕೇಳಿ. ಈ ಪ್ರಶ್ನೆಯನ್ನು ಮಂಗಳವಾರ ಅರ್ಧ ಗಂಟೆ ವೇಳೆಯಲ್ಲಿ ತೆಗೆದುಕೊಳ್ಳೋಣ. ಅರ್ಧ ಗಂಟೆಯಲ್ಲಿ ನೀವು ಆಗ ಮಾತನಾಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಂಗಳವಾರ ತೆಗೆದುಕೊಳ್ಳುವುದಾದರೆ ನಾನು ಈಗ ಮಾತನಾಡುವುದಿಲ್ಲ. ಆದರೆ ಕಳೆದ ಬಾರಿ ನೀವು ಆ ರೀತಿ ಅವಕಾಶ ಕೊಡಲೇ ಇಲ್ಲ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಈ ವಿಚಾರದಲ್ಲಿ ಈಗ ಮಾತನಾಡಬೇಕೆಂದಿದ್ದೇನೆ.

ಅಧ್ಯಕ್ಷರು : ಸ್ವಾಮಿ, ಇನ್ನೂ ಹನ್ನೆರಡು ಜನ ಇದ್ದಾರೆ. ಎಲ್ಲರಿಗೂ ಅವಕಾಶ ಕೊಡಬೇಕು ತಾನೇ?

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಇದು ರೈತರ ವಿಷಯ. ತುರ್ತಾಗಿ ಮಾತನಾಡಬೇಕಾದ್ದು.

ಅಧ್ಯಕ್ಷರು : ಸರಿ ಸ್ವಾಮಿ, ನನಗೂ ಗೊತ್ತಿದೆ. ನಾನೂ ರೈತ. ನನ್ನದೂ ತೆಂಗಿನ ತೋಟವಿದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ತೋಟಗಾರಿಕೆ ಇಲಾಖೆ ಬಗ್ಗೆ ಒಂದು ಗಂಟೆ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿ.

ಅಧ್ಯಕ್ಷರು : ಬೇಡಿ. ಅರ್ಧ ಗಂಟೆ ಕಾಲಾವಧಿಗೆ ನಾವು ಇದನ್ನು ಮಂಗಳವಾರ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ತಡೆಹಿಡಿಯಬೇಕು ಅಥವಾ ಮುಂದೂಡಬೇಕೆಂದು ನಾವೇನೂ ನಿಮಗೆ ಪತ್ರವನ್ನು ಕೊಟ್ಟಿಲ್ಲ. ಉತ್ತರವನ್ನು ಮಾನ್ಯ ಮಂತ್ರಿಗಳು ಈಗಾಗಲೇ ಕೊಟ್ಟಿದ್ದಾರೆ. ಅದರ ಮೇಲೆ ಇನ್ನೂ ಒಂದು ನಾಲ್ಕೈದು ಕ್ಲಾರಿಫಿಕೇಷನ್ ಅನ್ನು ಮಾನ್ಯ ಸದಸ್ಯರುಗಳು ಕೇಳುತ್ತಿದ್ದಾರೆ.

ಅಧ್ಯಕ್ಷರು : ಸ್ವಾಮಿ, ಇನ್ನು ಹನ್ನೆರಡು ಜನರು ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳುವವರು ಇದ್ದಾರೆ. ಕಮಾನ್ ಟೆಲ್‌ಮಿ, ಏನು ಮಾಡೋದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮೂರ್ನಾಲ್ಕು ಜನರಿಗೆ ಅವಕಾಶ ಕೊಡಿ. ಅದನ್ನು ಬಿಟ್ಟು ಪ್ರಶ್ನೆಯನ್ನು ತಡೆಹಿಡಿಯುವುದಕ್ಕೆ ಯಾರು ನಿಮಗೆ ಪತ್ರ ಕೊಟ್ಟರು ಅಧ್ಯಕ್ಷರೆ?

ಅಧ್ಯಕ್ಷರು : ತಡೆಹಿಡಿಯುತ್ತಿಲ್ಲ ನಾನು. ಇದು ಬಹಳ ಮಹತ್ತರವಾದ ವಿಷಯ. ಆದ್ದರಿಂದ ಅರ್ಧ ಗಂಟೆ ಡಿಸ್‌ಕಶನ್‌ಗೆ ತೆಗೆದುಕೊಳ್ಳೋಣ ಎಂದು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಸ್ಪೆಸಿಫಿಕ್ ಕೊಶ್ಚನ್ ಕೇಳಿದ್ದೇನೆ. ಐ ವಾಂಟ್ ಸ್ಪೆಸಿಫಿಕ್ ಆನ್ಸರ್. ಪರಿಹಾರ ಕೊಡುತ್ತೀರೋ ಅಥವಾ ಇಲ್ಲವೋ ಎಂದು ಮಾತ್ರ ನಾನು ಕೇಳುತ್ತಿರುವುದು. ಪರಿಹಾರ ಕೊಡುತ್ತೀರೋ ಇಲ್ಲವೋ?

ಅಧ್ಯಕ್ಷರು : ಯೋಚನೆ ಮಾಡೋಣ ಅಂಥ ಹೇಳಿದ್ರಲ್ಲಾ. ಆಗಲೀ ಅವರು ಯೋಚನೆ ಮಾಡೋಣ ಎಂದು ಹೇಳಿದ್ರಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಪರಿಹಾರ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಅವರು ಭರವಸೆ ಕೊಟ್ಟಿಲ್ಲ. ಚಿಕ್ಕಮಗಳೂರಿನಲ್ಲಿ ಒಂದರಲ್ಲಿಯೇ ನಾಲ್ಕು ಲಕ್ಷ ತೆಂಗಿನ ಮರಗಳು ಒಣಗಿಹೋಗಿವೆ ಎಂದು ಹೇಳುತ್ತಿದ್ದಾರೆ. ಆದರೆ ಇವರು ಇಲ್ಲಿ ಇಲ್ಲ ಎಂದು ಉತ್ತರ ಕೊಡುತ್ತಿದ್ದಾರೆ. ಇಂಥ ಉತ್ತರವನ್ನು ನಾವು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೆ?

ಅಧ್ಯಕ್ಷರು : ಶಿವಣ್ಣನವರೇ ಪರಿಹಾರದ ಬಗ್ಗೆ ಸರಿಯಾದಂಥ ಉತ್ತರವನ್ನು ಕೊಡಿ. ಮಾನ್ಯ ಸಿಂಧ್ಯಾರವರಿಗೆ ಪರಿಹಾರದ ಬಗ್ಗೆ ಸರಿಯಾದಂಥ ಉತ್ತರ ಬೇಕಂತೆ ತಾವು ದಯವಿಟ್ಟು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸದಸ್ಯರು ಚಿಕ್ಕಮಗಳೂರು ಕ್ಷೇತ್ರ ಒಂದರಲ್ಲಿಯೇ 4 ಲಕ್ಷ ತೆಂಗಿನ ಮರಗಳು ಒಣಗಿಹೋಗಿವೆ ಎಂದು ಹೇಳುತ್ತಿದ್ದಾರೆ. ಅವರೇನು ಸುಳ್ಳು ಹೇಳುತ್ತಿದ್ದಾರೆಯೇ? ಇವರು ಒಂದೂ ಸಹಿತ ಒಣಗಿಲ್ಲವೆಂದು ಹೇಳುತ್ತಿದ್ದಾರೆ. ಹೀಗೆ ಈ ಅಂಕಿ ಅಂಶಗಳನ್ನು ನಾವು ಒಪ್ಪುವುದು? ಇದು ಒಂದು ವಿಚಾರವಾದರೆ, ಒಂದು ತೆಂಗಿನ ಮರಕ್ಕೆ ಎರಡು ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಯೋಚನೆ ಮಾಡಿರಬೇಕಲ್ಲವೆ? ಹೇಗಿದ್ದರೂ ಕ್ಯಾಬಿನೆಟ್ ಸಬ್ ಕಮಿಟಿ ಇದೆ.

ಮಾನ್ಯ ಸದಸ್ಯರು : ಸದನ ಸಮಿತಿ ಕಳುಹಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏನ್ ಸದನ ಸಮಿತಿ ಕಳುಹಿಸುವುದು? ಎಲ್ಲಾ ಕಡೆಯಲ್ಲೂ ಇದು ಗೊತ್ತಿರುವ ವಿಚಾರವೇ ಇದಾಗಿದೆ. ಪರಿಹಾರ ಕೊಡಬೇಕು. ಪರಿಹಾರ ಕೊಡುವುದಕ್ಕೆ ಒಪ್ಪಿಕೊಳ್ಳುವುದಕ್ಕೆ ನಿಮಗೇನು ತೊಂದರೆ? ಪರಿಹಾರ ಕೊಡಿ. ಚರ್ಚೆ ಮಾಡುವುದಕ್ಕೆ ಏನಿದೆ ಇದರಲ್ಲಿ?

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ನಮ್ಮ ಮುಂದೆ ಇರತಕ್ಕಂಥದ್ದು ಎರಡು ಪ್ರಶ್ನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಬೇಡಿ. ನೀಲಕಂಠಪ್ಪನವರೆ, ಇನ್ನೂ ಹದಿಮೂರು ಜನರಿದ್ದಾರೆ. ಒಬ್ಬರಿಗೆ ಎರಡು ನಿಮಿಷದಂತೆ ಇಪ್ಪತ್ತಾರು ನಿಮಿಷ ಬೇಕಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಮಂಗಳವಾರ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಏನೇ ಆಗಲಿ ಡೆಫನೆಟ್ಟಾಗಿ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಪರಿಹಾರ ಕೊಡುತ್ತಾರೋ ಅಥವಾ ಇಲ್ಲವೋ ಎಂಬುದನ್ನು ಮಾನ್ಯ ಸಚಿವರು ಹೇಳಲಿ. ಅವರು ಪರಿಹಾರ ಕೊಡುತ್ತಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಅವರು ಹೇಳಬೇಕು.

ಅಧ್ಯಕ್ಷರು : ಶಿವಣ್ಣನವರೆ, ಪರಿಹಾರದ ಬಗ್ಗೆ ಉತ್ತರ ಹೇಳಿಯಪ್ಪಾ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಈಗಾಗಲೇ ಮೊದಲೇ ಕರೆದಿದ್ದೀರಿ. ಆದ್ದರಿಂದ ಈ ಬಗ್ಗೆ ಮಾತನಾಡುವವನಿದ್ದೇನೆ.

ಅಧ್ಯಕ್ಷರು : ಆ ಪ್ರಶ್ನೆಗೆ ಈಗ ಬರೋದಿಲ್ಲ. ಏಕೆಂದರೆ ಸಿಂಧ್ಯಾರವರು ಈಗಾಗಲೇ ಮಾತನಾಡುತ್ತಾ ಪರಿಹಾರದ ಬಗ್ಗೆ ಉತ್ತರ ಕೊಡಬೇಕೆಂದು ಕೇಳಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನನಗೆ ಮಾತನಾಡುವುದಕ್ಕೆ ಕರೆದಿದ್ದೀರಿ.

ಅಧ್ಯಕ್ಷರು : ಆಯಿತು. ಆದರೆ ನಿಮ್ಮನ್ನು ಕರೆದಾದ ಮೇಲೆ ಹದಿಮೂರು ಜನರ ಲಿಸ್ಟ್ ಬಂದಿದೆ. ಒಬ್ಬರಿಗೆ ಎರಡು ನಿಮಿಷ ಎಂದರೂ ಇಪ್ಪತ್ತಾರು ನಿಮಿಷ ಬೇಕು. ಅದಕ್ಕೋಸ್ಕರ ಅರ್ಧ ಗಂಟೆ ಬೇಕಾದರೆ ಒಂದು ಗಂಟೆ ಮಾತನಾಡೋಣ. ಮಂಗಳವಾರದಂದು ಒಂದು ಗಂಟೆ ಹೊತ್ತು ಡಿಸ್‌ಕಸ್ ಮಾಡೋಣ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಸಿಂಧ್ಯಾರವರು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಸಿಂಧ್ಯಾರವರು ಮೊದಲೇ ಮುಖ್ಯವಾಗಿ ಪ್ರಶ್ನೆ ಹಾಕಿದವರಾಗಿದ್ದಾರೆ. ಮಂಗಳವಾರ ಬೇಕಾದರೆ ಸಂಜೆ 5 ಗಂಟೆಯಿಂದ 6 ಗಂಟೆಯವರೆಗೆ ಡಿಸ್‌ಕಸ್ ಮಾಡೋಣ. ತಾವು ದಯವಿಟ್ಟು ಈಗ ಕುಳಿತುಕೊಳ್ಳಿ. ಇನ್ನು ಹದಿಮೂರು ಜನರು ಮಾತನಾಡುವವರಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಚರ್ಚೆ ಮಾಡತಕ್ಕಂಥ ವಿಷಯ ಏನೇನೂ ಉಳಿದಿಲ್ಲ. ಪರಿಹಾರದ ಬಗ್ಗೆ ಸ್ಪಷ್ಟವಾಗಿ ಹೇಳಬೇಕು ಮತ್ತು ಪರಿಹಾರ ಯಾವಾಗ ಕೊಡುತ್ತಾರೆ ಎಂಬ ಬಗ್ಗೆ ಹೇಳಬೇಕು.

ಅಧ್ಯಕ್ಷರು : ಪರಿಹಾರದ ಬಗ್ಗೆ ಉತ್ತರ ಹೇಳಿ ಶಿವಣ್ಣನವರೇ

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ,

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಈ ವಿಚಾರದಲ್ಲಿ ನಿಮ್ಮ ಮರಗಳ ಬಗ್ಗೆಯೂ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಪುನಃ ನಮ್ಮ ಮರಗಳು ಪುನಶ್ಚೇತನಗೊಂಡಿದೆ. ಮಂಗಳವಾರ ನನ್ನ ಮರಗಳ ಬಗ್ಗೆಯೂ ಹೇಳುತ್ತೇನೆ. ಪರಿಹಾರದ ಬಗ್ಗೆ ಹೇಳಿ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಒಣಗಿ ಹೋಗಿರುವ ಮರಗಳ ಸಂಖ್ಯೆಯ ಅಂಕಿ ಅಂಶ ಸರಿ ಇಲ್ಲವೆಂದು ಹೇಳಿದ್ದಾರೆ. ಎಷ್ಟು ಮರಗಳು ಒಣಗಿದೆ ಎಂಬ ಬಗ್ಗೆ ಸರಿಯಾದಂಥ ಮಾಹಿತಿಯನ್ನು ನಾನು ಪಡೆದುಕೊಳ್ಳುತ್ತೇನೆ. ಕೇವಲ ತೆಂಗಿನ ಮರ ಒಂದೇ ಅಲ್ಲ ಬೇರೆ ಬೇರೆ ತೋಟಗಾರಿಕಾ ಬೆಳೆಗಳು ಕಳೆದ ಎರಡ್ಮೂರು ವರ್ಷಗಳಿಂದ ಸರಿಯಾದ ಮಳೆಯಾಗದೇ ಒಣಗಿಹೋಗಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ನಾನು ಮಾನ್ಯ ಶಿವಾನಂದ ಪಾಟೀಲರ ಕ್ಷೇತ್ರಕ್ಕೆ ಹೋಗಿದ್ದೆ. ತಿಕೋಟಾ ಕ್ಷೇತ್ರಕ್ಕೆ ಹೋಗಿದ್ದೆ. ಅದೇ ರೀತಿ ಅಥಣಿ ಕ್ಷೇತ್ರಕ್ಕೂ ಹೋಗಿದ್ದೆ. ಇದಲ್ಲದೇ ನಮ್ಮ ಗುಲ್ಬರ್ಗಾ ಜಿಲ್ಲೆಗೂ ಕೂಡ ಹೋಗಿದ್ದೆ. ಅಲ್ಲೆಲ್ಲಾ ಹೆಚ್ಚಾಗಿ ದ್ರಾಕ್ಷಿಯನ್ನೇ ಬೆಳೆಯತಕ್ಕಂಥದ್ದು. ಅಲ್ಲೆಲ್ಲಾ ಸಂಪೂರ್ಣವಾಗಿ ಒಣಗಿಹೋಗಿರತಕ್ಕಂಥದ್ದನ್ನು ನೋಡಿದೆ. ನಾನು ಒಂದು ಆಸೆ ಇಟ್ಟುಕೊಂಡೇ ಹೋದೆ. ಏಕೆಂದರೆ ಬಿಜಾಪುರ ಜಿಲ್ಲೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಶೇಕಡ 100ಕ್ಕೆ 100ರಷ್ಟು ಹನಿ ನೀರಾವರಿಗೆ ಒತ್ತನ್ನು ಕೊಟ್ಟಿದ್ದಾರೆಯಾದ್ದರಿಂದ

ಆ ಜಿಲ್ಲೆಗೆ ಇನ್ನೂ ತೋಟಗಾರಿಕೆ ಬೆಳೆಗಳಿಗೆ ಒತ್ತನ್ನು ಕೊಡಬೇಕು ಎಂದು ಹೋಗಿದ್ದೆ. ಶೇಕಡ 100ರಷ್ಟು 100 ಹನಿ ನೀರಾವರಿಗೆ ನಮ್ಮ ಜಿಲ್ಲೆಯಲ್ಲಿ ಅವಕಾಶ ಕೊಟ್ಟಿದ್ದೀರಿ ಎಂದು ರೈತರೂ ಕೂಡ ಸಂತೋಷ ಪಟ್ಟರು. ನಾನು ಅಲ್ಲಿ ಕಂಡಂಥ ದೃಶ್ಯ ಏನು ಎಂದರೆ ದ್ರಾಕ್ಷಿ ಬೆಳೆಯತಕ್ಕಂಥವರು, ನಿಂಬೆ ಬೆಳೆಯುತ್ತಿರುವವರು ಮತ್ತು ದಾಳಿಂಬೆ ಬೆಳೆಯತಕ್ಕಂಥವರು ತಮ್ಮ ತಮ್ಮ ತೋಟಗಳಿಗೆ ನನ್ನನ್ನು ಕರೆದುಕೊಂಡು ಹೋಗಿ ಬೆಳೆ ಒಣಗಿರುವುದನ್ನು ಅವರು ತೋರಿಸಿದರು. ಎಷ್ಟು ತೋಟಗಾರಿಕಾ ಬೆಳೆಗಳೂ ಕೂಡ ಒಣಗಿಹೋಗಿದೆ ಎನ್ನುವುದಕ್ಕೋಸ್ಕರ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ಇದೊಂದೇ ಬೆಳೆಯಲ್ಲ, ಎಲ್ಲಾ ತೋಟಗಾರಿಕಾ ಬೆಳೆಗಳೂ ಕೂಡ ನೀರಿಲ್ಲದೆ ಒಣಗಿ ಹೋಗಿರುವುದನ್ನು ನಾವು ಕಾಣುತ್ತಿದ್ದೇವೆ. ಇದರ ಅಂಕಿ ಅಂಶಗಳನ್ನು ಒದಗಿಸಿಕೊಡುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಇನ್ನು ಪರಿಹಾರ ಕೊಡಬೇಕೆಂದು ಅತ್ಯಂತ ಅನುಭವಿ ಸಚಿವರಾಗಿದ್ದ ಮಾನ್ಯ ಸಿಂಧ್ಯಾರವರು ಹೇಳುತ್ತಿದ್ದಾರೆ. ಅತ್ಯಂತ ಅನುಭವ ಉಳ್ಳವರು ಹಾಗೂ ಎಲ್ಲಾ ವಿಚಾರಗಳನ್ನು ತಿಳಿದಂಥವರೂ ಕೂಡ ಅವರಾಗಿದ್ದಾರೆ. ಅವರು ತೋಟಗಾರಿಕಾ ಇಲಾಖೆಯಲ್ಲಿ ಪರಿಹಾರ ಕೊಡುವುದಕ್ಕೆ ಸಾಧ್ಯತೆ ಇದೆಯೇ ಎಂದು ಕೇಳಿದ್ದಾರೆ. ನಾವು ತೋಟಗಾರಿಕಾ ಇಲಾಖೆಯಲ್ಲಿ ಪರಿಹಾರ ಕೊಡುವುದಕ್ಕೆ ಸಾಧ್ಯತೆ ಇಲ್ಲ ಎನ್ನತಕ್ಕಂಥದ್ದನ್ನು ಹೇಳಿದ್ದೇವೆ. ಒಂದು ವಿಚಾರವೇನು ಎಂದರೆ ಈ ರೀತಿಯಾಗಿ ನಷ್ಟ ಎಷ್ಟಾಗಿದೆ ಎಂದು ಅಂದಾಜು ಮಾಡಿದ ಮೇಲೆ.

ಅಧ್ಯಕ್ಷರು : ನೀವು ಇನ್ನೂ ಯಾವಾಗ ಅಂದಾಜು ಮಾಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸ್ವಾಮಿ, ಇವರ ಅಂದಾಜು ತೆಗೆದುಕೊಂಡು ಏನು ಮಾಡೋದು? ಈಗ ಪ್ರಶ್ನೆ ಇರತಕ್ಕಂಥದ್ದು ತೆಂಗಿನ ಮರಗಳೇನು ಸುಳಿ ಸಮೇತ ಒಣಗಿಹೋಗಿವೆ ಅದಕ್ಕೆ ತಲಾ ಒಂದು ಮರಕ್ಕೆ ಎರಡರಿಂದ ಐದು ಸಾವಿರ ರೂ.ಗಳ ಪರಿಹಾರ ಕೊಡಬೇಕು ಎಂಬುದೇ ನಮ್ಮ ಒತ್ತಾಯ. ನಾನು ಏಕೆ ಎರಡರಿಂದ ಐದು ಸಾವಿರ ರೂ.ಗಳ ಪರಿಹಾರ ಎಂದು ಹೇಳುತ್ತಿದ್ದೇನೆಂದರೆ ಸುಮಾರು ಇಪ್ಪತ್ತೈದು ಮೂವತ್ತು ವರ್ಷಗಳಿಂದ ಬೆಳೆದಿರತಕ್ಕಂಥ ತೆಂಗಿನ ಮರಗಳೆಲ್ಲವೂ ಒಣಗಿ ಹೋಗಿವೆ, ಇದಲ್ಲದೆ ಆರು ವರ್ಷಗಳ ಹಿಂದೆ ಹಾಕಿರತಕ್ಕಂಥ ತೆಂಗಿನಮರಗಳೂ ಒಣಗಿಹೋಗಿವೆ. ಆದ್ದರಿಂದ ನಾನು ಪರಿಹಾರದ ಬಗ್ಗೆ ಸ್ಪೆಸಿಫಿಕ್ ಉತ್ತರವನ್ನು ಮಾನ್ಯ ಮಂತ್ರಿಗಳಿಂದ ಕೇಳುತ್ತಿದ್ದೇನಷ್ಟೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಅದಕ್ಕೇ ನಾನು ಹೇಳುವುದೇನೆಂದರೆ ನಮ್ಮಲ್ಲಿ ಸಚಿವ ಸಂಪುಟದ ಉಪ ಸಮಿತಿ ಇದೆ, ಬರ ಪರಿಹಾರದ ಉಪ ಸಮಿತಿ ಇದೆ. ಆದ್ದರಿಂದ ಸಚಿವ ಸಂಪುಟದ ಮುಂದೆ ಇದನ್ನು ತರಬೇಕು ಎನ್ನುವ ದೃಷ್ಟಿಯಿಂದಲೇ ನಾನು ಒಂದು ಉದ್ದೇಶ ಇಟ್ಟುಕೊಂಡಿದ್ದೇನೆ. ಈ ವಿಧಾನಸಭಾ ಅಧಿವೇಶನ ನಡೆಯತಕ್ಕಂಥ ಅವಧಿಯಲ್ಲಿಯೇ ಎಲ್ಲೆಲ್ಲಿ ತೋಟಗಾರಿಕಾ ಬಳೆಗಳನ್ನು ಬೆಳೆಯತಕ್ಕಂಥ ಜಿಲ್ಲೆಗಳಿವೆ ಆ ಜಿಲ್ಲೆಯ ಶಾಸಕರುಗಳನ್ನು ಕರೆದು ಅವರ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿ ಎಷ್ಟು ನಷ್ಟವಾಗಿದೆ ಎನ್ನುವ ಒಂದು ಅಂದಾಜು ಮಾಡಿ ಸಮಿತಿ ಮುಂದೆ ಸಲ್ಲಿಸಿರುವ ಕೇಂದ್ರಕ್ಕೆ ವರದಿಯನ್ನು ಸಲ್ಲಿಸತಕ್ಕಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಸರ್ಕಾರದ ಈ ಧೋರಣೆಯನ್ನು ನಾನು ಖಂಡಿಸುತ್ತೇನೆ. ಇವೊತ್ತು ಇವರು ಮಾಡಿರತಕ್ಕಂಥ ಮಹಾಪರಾಧ ಎಂದರೆ ಕರ್ನಾಟಕ ರಾಜ್ಯದಲ್ಲಿ ಇಷ್ಟೊಂದು ತೋಟಗಾರಿಕಾ ಬೆಳೆಗಳು ಒಣಗಿರುವಾಗ ಇವರು ಏನು ಮಾಡಿದ್ದಾರೆ? ಈ

ಸದನ ಪವಿತ್ರವಾಗಿರತಕ್ಕಂಥದ್ದು. ನಾಳೆ ಕೇಂದ್ರ ಸರ್ಕಾರದವರು ಪರಿಹಾರ ಕೊಡಬೇಕಾದರೆ, ಯಾರಾದರೂ ಬ್ಯಾಂಕ್‌ಗಳವರು ಸಾಲ ಕೊಡಬೇಕಾದರೆ, ಎಲ್ಲಾ ವಿವರಗಳನ್ನು ಕೇಳುತ್ತಾರೆ. ಈಗ ನಾವು ಅನುಭವಿ ಸಚಿವರು ಎಂದು ತಾವು ಹೇಳಿದಿರಿ, ನಮ್ಮ ಅನುಭವದಲ್ಲಿ ಹೇಳಬೇಕೆಂದರೆ 1983ರಲ್ಲಿ ಹೆಗಡೆಯವರ ಸರ್ಕಾರವಿದ್ದಾಗ ಇದೇ ರೀತಿ ಬರ ಬಂದಿತ್ತು. 1984ರಲ್ಲಿ ಬಂದಿತ್ತು. 1985ರಲ್ಲೂ ಬರ ಬಂದಿತ್ತು. ಆಗ ಇದ್ದಂಥ ವಿರೋಧ ಪಕ್ಷದವರು ನಮಗೆ ಏನು ಹೇಳುತ್ತಿದ್ದರೆಂದರೆ ಹೆಗಡೆಯವರು ಬಂದರೆ ಬರಗಾಲ, ಜನತಾ ಸರ್ಕಾರ ಎಂದರೆ ಬರಗಾಲ ಎನ್ನುತ್ತಿದ್ದರು. ರೈತರ ಸಾಲ ಬಡ್ಡಿ ಮನ್ನಾ ಮಾಡಲಿಲ್ಲವೆ? ಕ್ರಾಪ್ ಕಾಂಪನ್‌ಸೆಶನ್ ನಾವು ಕೊಡಲಿಲ್ಲವೆ? ಆದ್ದರಿಂದ ಮಾನ್ಯ ಅಧ್ಯಕ್ಷರೆ, ಇವೊತ್ತು ಈ ಸರ್ಕಾರದ ಧೋರಣೆ ಏನಿದೆ, ತೆಂಗಿನ ಮರಗಳು ಕೋಟಿ ಮರಗಳು ಒಣಗಿಹೋಗಿದ್ದರೂ ಕೂಡ ಪರಿಹಾರ ಕೊಡುವುದಿಲ್ಲವೆಂದು ಇವರು ಏನು ಹೇಳುತ್ತಿದ್ದಾರೆ ಈ ಒಂದು ಧೋರಣೆ ಸರಿಯಿಲ್ಲ. ಇದನ್ನು ಖಂಡಿಸುತ್ತೇನೆ. ಏಕೆಂದರೆ ಕ್ಷಮಿಸುವುದಕ್ಕೆ ಆಗದೇ ಇರತಕ್ಕಂಥ ತಪ್ಪನ್ನು ಇವರು ಮಾಡಿದ್ದಾರೆ. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಪಿ.ಜಿ.ಆರ್. ಸಿಂಧ್ಯಾರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ನೋಡಿ, ಈ ಪ್ರಶ್ನೆ ಬಗ್ಗೆ ಮಂಗಳವಾರ 5.00 ಗಂಟೆಗೆ ತೆಗೆದುಕೊಳ್ಳೋಣ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಧೋರಣೆ ಏನಿದೆ ಅದು ಸರಿಯಲ್ಲ. ಆದ್ದರಿಂದ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾನೂ ಕೂಡ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಸಿ. ಚೆನ್ನಿಗಪ್ಪನವರು ಹಾಗೂ ಮಾನ್ಯ ಸದಸ್ಯರಾದ ಕೆ.ಎಂ. ಕೃಷ್ಣಮೂರ್ತಿಯವರೂ ಕೂಡ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಈ ಪ್ರಶ್ನೆ ಬಗ್ಗೆ ಮಂಗಳವಾರ ಐದು ಗಂಟೆಗೆ ತೆಗೆದುಕೊಳ್ಳೋಣ. ಮುಂದಿನ ಪ್ರಶ್ನೆಗಳನ್ನು ಮುಂದಿನ ದಿವಸ ತಗೆದುಕೊಳ್ಳೋಣ. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಶೆಟ್ಟರ್‌ರವರೆ, ತಾವು ಪ್ರಾರಂಭ ಮಾಡಿ. ಆರು ಪ್ರಶ್ನೆಗೆ ಒಂದು ಗಂಟೆ ಹತ್ತು ನಿಮಿಷವಾಗಿದೆ. ಮುಂದಿನ ಪ್ರಶ್ನೆಗಳನ್ನು ಸೆಕ್ಷ್ಟ ಟೈಂ ತೆಗೆದುಕೊಳ್ಳೋಣ. ಮುಂದೆ ಎಲ್ಲಿ ಹೋಗುವುದಿಲ್ಲ. ಲ್ಯಾಪ್ಸ್ ಆಗುವುದಿಲ್ಲ ಬಿಡಿ. ಇನ್ನು ಅನ್ ಸ್ಟಾರ್ಡ್ ಕ್ವೊಶ್ಚನ್ ಹೇಳಿ.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 11.07.2003ರ ಲಿಖಿತ ಮೂಲಕ ಉತ್ತರಿಸುವ 77 ಪ್ರಶ್ನೆಗಳ ಪೈಕಿ 46ಕ್ಕೆ ಉತ್ತರಗಳನ್ನು ಈ ಸದನದಲ್ಲಿ ಮಂಡಿಸುತ್ತಿದ್ದೇನೆ. ** ಅನುಬಂಧ-I

ಅಧ್ಯಕ್ಷರು : ಮಂಡಿಸಲಾಯಿತು. ಆರು ಪ್ರಶ್ನೆಗೆ ಒಂದು ಗಂಟೆ ಹತ್ತು ನಿಮಿಷ ಆಯಿತು. ಮಾನ್ಯ ಭೈರೇಗೌಡರೆ, ದಯವಿಟ್ಟು ತಾವು ಅನುಭವಸ್ಥರು. ಐದಾರುಸಲ ಚುನಾಯಿತರಾಗಿದ್ದೀರಿ. ಪ್ರಶ್ನೋತ್ತರ ವೇಳೆ ಮುಗಿಯಿತು. ಮಾನ್ಯ ಶೆಟ್ಟರ್‌ರವರೆ, ಪ್ರಾರಂಭ ಮಾಡಿ. ದಯವಿಟ್ಟು ಕುಳಿತುಕೊಳ್ಳಿ ಇನ್ನೊಂದು ದಿವಸ ತೆಗೆದುಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಿನ್ನೆಯ ಅನ್ ಸ್ಟಾರ್ಡ್ ಕ್ವೊಶ್ಚನ್ ಅನ್ನು ಯಾವಾಗ ಲೇ ಮಾಡುತ್ತೀರಿ?